# ಕರ್ನಾಟಕ ಸರ್ಕಾರದ ನಡಾವಳಿಗಳು

ವಿಷಯ: ವಾಣಿಜ್ಯ ತೆರಿಗೆಗಳ ಇಲಾಖೆಯ ಜಾರಿ ಮತ್ತು ಜಾಗೃತಿ ಕಾರ್ಯಗಳಿಗಾಗಿ "ಗೌಪ್ಯ ಸೇವಾ ನಿಧಿ" ಯನ್ನು ಸ್ಥಾಪಿಸುವ ಬಗ್ಗೆ.

ಓದಲಾಗಿದೆ: ವಾಣಿಜ್ಯ ತೆರಿಗೆಗಳ ಆಯುಕ್ತರ ಕಡತ ಸಂಖ್ಯೆ: ವಾತೆಅಆ(ಲೆಪ)/ಆಶಾ/ ಸಿಆರ್-83/2018-19.

***

**ಪ್ರಸ್ತಾವನೆ:**

ಸರಕು ಮತ್ತು ಸೇವಾ ತೆರಿಗೆ ಕಾಯ್ದೆಯು ವಂಚಕರನ್ನು ಬಂಧಿಸುವ ಹಾಗೂ ತೆರಿಗೆ ವಂಚಿಸಿ ಸರಕು ಸಾಗಾಣಿಕೆ ಮಾಡುವ ವಾಹನಗಳನ್ನು ವಶಪಡಿಸಿಕೊಳ್ಳುವ ಅಧಿಕಾರವನ್ನು ಅಧಿಕಾರಿಗಳಿಗೆ ನೀಡುತ್ತದೆ. ರಾಜ್ಯದಲ್ಲಿ ಮತ್ತು ಬೇರೆ ರಾಜ್ಯಗಳಲ್ಲಿ ಇರಬಹುದಾದ ವಂಚಕರ ವಂಚನೆಯ ಜಾಲವನ್ನು ಪತ್ತೆಹಚ್ಚಲು ಸಾಕಷ್ಟು ಪ್ರಯಾಣ, ಪ್ರಶ್ನಿಸುವಿಕೆ, ಮಾಹಿತಿ ಹಾಗೂ ಸಾಕ್ಷಗಳ ಸಂಗ್ರಹಣೆ ಮತ್ತಿತರ ಕಾರ್ಯಗಳಲ್ಲಿ ಅಧಿಕಾರಿಗಳು ತೊಡಗಿಸಿಕೊಳ್ಳಬೇಕಾಗಿರುತ್ತದೆ. ಮುಂದುವರೆದು, ಸರಕು ಸಾಗಾಣಿಕೆ ವಾಹನಗಳನ್ನು ವಶಪಡಿಸಿಕೊಂಡಾಗ, ಅದನ್ನು ಸುರಕ್ಷಿತ ಸ್ಥಳಕ್ಕೆ ಕೊಂಡೊಯ್ಯಲು ವಾಹನ ಚಾಲಕರ ಸೇವೆಯನ್ನು ಪಡೆಯಬೇಕಾಗಿರುತ್ತದೆ ಹಾಗೂ ಸರಕುಗಳ ಮತ್ತು ಸರಕು ವಾಹನದ ಸುರಕ್ಷತೆಗಾಗಿ ಭದ್ರತೆಯನ್ನು ಹೆಚ್ಚಿಸಬೇಕಾಗಿರುತ್ತದೆ. ವಂಚನೆಯ ಚಟುವಟಿಕೆಗಳನ್ನು ಪತ್ತೆಹಚ್ಚಲು ಗೌಪ್ಯ ಮಾಹಿತಿಯನ್ನು ಸಂಗ್ರಹಿಸುವಿಕೆ, ತೆರಿಗೆ ವಂಚನೆಯ ಬೇರುಗಳನ್ನು ಪತ್ತೆಹಚ್ಚಿ ಅದನ್ನು ನಿರೂಪಿಸಲು ತೀವ್ರವಾದ ತನಿಖೆ ನಡೆಸಲು ಖಾಸಗಿ ವ್ಯಕ್ತಿಗಳಿಂದ ಮಾಹಿತಿ ಹಾಗೂ ವಾಹನದ ಬಳಕೆ, ವಿವಿಧ ಸಂಸ್ಥೆಗಳು ಹಾಗೂ ಇಲಾಖೆಗಳ ನಡುವೆ ಸಮನ್ವಯ ಸಾಧಿಸುವುದು, ತಕ್ಷಣದ ಅವಶ್ಯಕತೆಗಾಗಿ ಲೇಖನ ಸಾಮಗ್ರಿಗಳು, ಡೀಸೆಲ್, ಪೆಟ್ರೋಲ್ ಖರೀದಿ, ಸಾಮೂಹಿಕ ತಪಾಸಣೆ / ಶೋಧನೆ ಕಾರ್ಯಗಳಲ್ಲಿ ತೊಡಗಿದವರಿಗೆ ಊಟದ ವ್ಯವಸ್ಥೆ, ಗೋದಾಮು ತಪಾಸಣೆ, ಕಾನೂನು ಬಾಹಿರ ಸರಕು ಸಾಗಾಣೆಯ ತಪಾಸಣೆ ಹಾಗೂ ರೈಲ್ವೇ ಮತ್ತಿತರ ಸಂಸ್ಥೆಗಳಲ್ಲಿನ ವಹಿವಾಟುಗಳ ತಪಾಸಣೆಯನ್ನು ಯಾವುದೇ ಸಮಯ ನಷ್ಟವಿಲ್ಲದೇ ತಕ್ಷಣದಲ್ಲಿ ನಡೆಸಲು ಬೇಕಾಗುವ ಸಮನ್ವಯವನ್ನು ಸಾಧಿಸಲು ಹಾಗೂ ಈ ಮೂಲಕ ನಿಗದಿತ ಗುರಿ ತಲುಪಲು ತಕ್ಷಣದ ಸಂಪನ್ಮೂಲದ ಅವಶ್ಯಕತೆ ಇದ್ದು, ಗೌಪ್ಯತೆ ಕಾಪಾಡುವ ಅವಶ್ಯಕತೆಯೂ ಇರುತ್ತದೆ. ಇದಕ್ಕೆ ಜಾರಿ ವಿಭಾಗದ ಅಧಿಕಾರಿಗಳು ಮತ್ತು ಮಾಹಿತಿದಾರರ ನಡುವೆ ಸಂಘಟಿತ ಗೌಪ್ಯ ಪ್ರಯತ್ನಗಳ ಅವಶ್ಯಕತೆ ಇದ್ದು, ಇದಕ್ಕಾಗಿ ತಗುಲುವ ವೆಚ್ಚವನ್ನು ಭರಿಸಲು ಅಧಿಕಾರಿಗಳ ಬಳಿ ಹಣ ಇರುವುದರ ಅವಶ್ಯಕತೆ ಇರುತ್ತದೆ ಎಂದು ವಾಣಿಜ್ಯ ತೆರಿಗೆಗಳ ಆಯುಕ್ತರು ಪ್ರಸ್ತಾವನೆಯಲ್ಲಿ ಉಲ್ಲೇಖಿಸಿರುತ್ತಾರೆ.

22/XI/18

ಈ ಕಾರಣಕ್ಕಾಗಿ ಹಣಕಾಸು ನಿಧಿಯ ಅವಶ್ಯಕತೆ ಇದ್ದು, ಅಧಿಕಾರಿಗಳ ಹಾಗೂ ಮಾಹಿತಿದಾರರ ಭದ್ರತೆಯ ದೃಷ್ಟಿಯಿಂದ ಅಧಿಕಾರಿಗಳ ಈ ಪ್ರಯತ್ನಗಳನ್ನು ಗೌಪ್ಯವಾಗಿ ಇಡುವ ಅವಶ್ಯಕತೆ ಇರುತ್ತದೆ. ಅಲ್ಲದೇ, ಈ ಸಂಬಂಧದ ಯಾವುದೇ ನಡಾವಳಿಗಳ, ರೂಢಿಗಳ, ಮಾರ್ಗದರ್ಶಿಗಳ, ನಿಯಮ ಮತ್ತು ನಿಬಂಧನೆಗಳ ಮೂಲಕ ಈ ಪ್ರಯತ್ನಗಳು ಬಹಿರಂಗಗೊಂಡಲ್ಲಿ, ಜಾರಿ ಚಟುವಟಿಕೆಗಳ ಕಾರ್ಯಾಚರಣೆಗೆ ಅಡಚಣೆ ಉಂಟಾಗಿ, ಹೊಸ ವಿಧಾನಗಳ ಮೂಲಕ ಅಧಿಕಾರಿಗಳ ಪ್ರಯತ್ನಗಳನ್ನು ವಿಫಲಗೊಳಿಸುವುದಲ್ಲದೇ, ವ್ಯವಸ್ಥೆಯನ್ನು ಬುಡಮೇಲು ಮಾಡುವ ಸಂಭವವಿರುವುದರಿಂದ, ಅಧಿಕಾರಿಗಳು ಸಂಗ್ರಹಿಸಿದ ಗೌಪ್ಯ ಮಾಹಿತಿಯ ವಿಶ್ವಾಸಾರ್ಹತೆಯನ್ನು ಹಾಗೆಯೇ ಉಳಿಸುವ ಅವಶ್ಯಕತೆ ಇರುತ್ತದೆ ಎಂದೂ ಸಹ ಪ್ರಸ್ತಾವಿಸಿರುತ್ತಾರೆ.

ಇಂತಹ ಗೌಪ್ಯ ಸೇವೆಯ ವ್ಯವಸ್ಥೆಯನ್ನು ಬೆಂಬಲಿಸಲು ಸರ್ಕಾರವು ಕರ್ನಾಟಕ ಸಾದಿಲ್ವಾರು ವೆಚ್ಚದ ಕೈಪಿಡಿ, 1958 ರ ಕಲಂ 47 ರ ಮೂಲಕ ಮಾಹಿತಿದಾರರಿಗೆ ಅಥವಾ ಇತರೆ ಯಾವುದೇ ವಿಷಯಗಳಲ್ಲಿ ಹಣ ಪಾವತಿಸಲು ಅವಕಾಶ ಕಲ್ಪಿಸಿ ಗೌಪ್ಯತೆ ಕಾಪಾಡುವುದನ್ನು ಸಂಹಿತೆಯಲ್ಲಿ ಕಲ್ಪಿಸಿರುವುದರಿಂದ, ಸಂಹಿತೆಯ ಆಶಯಗಳಿಗೆ ಅನುಗುಣವಾಗಿ ಮಾಹಿತಿದಾರರಿಗೆ ಸೂಕ್ತ ಪ್ರೋತ್ಸಾಹಧನ ನೀಡುವ ಅವಶ್ಯಕತೆ ಇರುತ್ತದೆ ಎಂದು ಪ್ರಸ್ತಾವಿಸಿರುತ್ತಾರೆ.

ಪ್ರಸ್ತುತ ವಾಣಿಜ್ಯ ತೆರಿಗೆಗಳ ಇಲಾಖೆಯಲ್ಲಿ ಜಾರಿಯಲ್ಲಿರುವ ಯೋಜನೆಯು ರೂ.50,000/- ಗಳ ಗರಿಷ್ಟ ಮಿತಿಗೊಳಪಟ್ಟು ಮಾಹಿತಿದಾರರಿಗೆ ಪ್ರೋತ್ಸಾಹಧನ ನೀಡುವ ಅವಕಾಶ ಹೊಂದಿದ್ದು, ಈ ಮೊತ್ತವನ್ನು ಖಜಾನೆಯಿಂದ ಪಡೆದು ಮಾಹಿತಿದಾರರಿಗೆ ನೀಡಲು ವಾಡಿಕೆಯ ವಿಸ್ತೃತವಾದ ವಿಧಾನಗಳನ್ನು ಅನುಸರಿಸಬೇಕಾಗಿರುತ್ತದೆ. ಪ್ರಸ್ತುತ ಯೋಜನೆಯು ಪ್ರೋತ್ಸಾಹಧನದ ಗರಿಷ್ಠ ಮಿತಿಯನ್ನು ರೂ.50,000/- ಮಿತಿಗೊಳಿಸಿದ್ದು, ಇದು ಕೇಂದ್ರ ಸರ್ಕಾರದ ಯೋಜನೆಗಳಿಗೆ ಹೋಲಿಸಿದಾಗ ಬಹಳ ಕಡಿಮೆಯಾಗಿರುತ್ತದೆ. ಅಲ್ಲದೇ, ತಕ್ಷಣದ ವೆಚ್ಚಗಳಿಗಾಗಿ ಪಾವತಿಸಲು ಜಾರಿ ಮತ್ತು ಜಾಗೃತಿ ವಿಭಾಗಗಳ ನಿಯಂತ್ರಣಾಧಿಕಾರಿಗಳಿಗೆ ಗೌಪ್ಯ ಸೇವಾ ನಿಧಿಯನ್ನು ಒದಗಿಸಲಾಗಿರುವುದಿಲ್ಲ. ಸರಕು ಮತ್ತು ಸೇವಾ ತೆರಿಗೆ ಕಾಯ್ದೆಯನ್ನು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳೆರಡೂ ಒಟ್ಟಿಗೆ ನಿರ್ವಹಿಸುತ್ತಿರುವುದರಿಂದ, ಮಾಹಿತಿದಾರರಿಗೆ ಬಹುಮಾನ ನೀಡುವಾಗ ಕಾರ್ಯವಿಧಾನ ಹಾಗೂ ಹಣಕಾಸು ಮೊತ್ತಕ್ಕೆ ಸಂಬಂಧಿಸಿದಂತೆ ಕೇಂದ್ರದ ಯೋಜನೆಯ ಮಾದರಿಯಲ್ಲಿ ರಾಜ್ಯದ ವಾಣಿಜ್ಯ ತೆರಿಗೆಗಳ ಇಲಾಖೆಯೂ ಯೋಜನೆಯನ್ನು ಹೊಂದುವ ಅವಶ್ಯಕತೆ ಇರುತ್ತದೆ. ಕೇಂದ್ರ ಸರ್ಕಾರವು ಇದೇ ಮಾದರಿಯ ಕಾರ್ಯವಿಧಾನ ಹಾಗೂ ನಗದು ವೆಚ್ಚದ ವಿಧಿವಿಧಾನಗಳನ್ನು ಜಿಎಸ್‌ಟಿ ಆಡಳಿತದಲ್ಲಿ ಅಳವಡಿಸಿಕೊಂಡಿರುತ್ತದೆ.

ಈ ರೀತಿಯ ಕಾರ್ಯಚಟುವಟಿಕೆಗಳನ್ನು ಕೈಗೆತ್ತಿಕೊಳ್ಳಲು ರೂಪಿತವಾಗಿರುವ ಕರ್ನಾಟಕ ವಾಣಿಜ್ಯ ತೆರಿಗೆಗಳ ಇಲಾಖೆಯ ಜಾರಿ ಮತ್ತು ಜಾಗೃತಿ ವಿಭಾಗಗಳಿಗೆ ಈ ವೆಚ್ಚಗಳಿಗಾಗಿ ಹಣಕಾಸು ನಿಧಿಯನ್ನು ಒದಗಿಸುವ ಅವಶ್ಯಕತೆ ಇರುತ್ತದೆ. ರಾಜ್ಯದ ಬೊಕ್ಕಸಕ್ಕೆ ಬರಬೇಕಾದ ತೆರಿಗೆಯ ವಂಚನೆ ಹಾಗೂ ಮೋಸವನ್ನು ತಡೆಗಟ್ಟುವ ಜವಾಬ್ದಾರಿಯನ್ನು ಹೊಂದಿರುವ ಈ ಅಧಿಕಾರಿಗಳಿಗೆ ಅವರ ಜವಾಬ್ದಾರಿಯನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ಕರ್ನಾಟಕ ಸಾದಿಲ್ವಾರು ವೆಚ್ಚದ ಕೈಪಿಡಿ, 1958 (MCE) ರಲ್ಲಿ ನಿಗದಿಪಡಿಸಿರುವ ನಿಯಮಗಳ ಮಾದರಿಯಲ್ಲಿ 'ಗೌಪ್ಯ ಸೇವಾ ನಿಧಿ'ಯನ್ನು ಒದಗಿಸಬೇಕಾಗಿರುತ್ತದೆ. ಆದುದರಿಂದ ವಾಣಿಜ್ಯ ತೆರಿಗೆಗಳ ಇಲಾಖೆಯಲ್ಲಿ 'ಗೌಪ್ಯ ಸೇವಾ ನಿಧಿ'ಯನ್ನು ಸ್ಥಾಪಿಸಿ, ಅನುದಾನವನ್ನು ಒದಗಿಸುವಂತೆ ಆಯುಕ್ತರು ತಮ್ಮ ಪ್ರಸ್ತಾವನೆಯಲ್ಲಿ ಕೋರಿರುತ್ತಾರೆ.

ವಾಣಿಜ್ಯ ತೆರಿಗೆಗಳ ಆಯುಕ್ತರ ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಲಾಯಿತು. ವಾಣಿಜ್ಯ ತೆರಿಗೆಗಳ ಇಲಾಖೆಯಲ್ಲಿ 'ಗೌಪ್ಯ ಸೇವಾ ನಿಧಿ' ಯನ್ನು ಮೇಲ್ಕಂಡ ಕಾರಣಗಳಿಗಾಗಿ ಸ್ಥಾಪಿಸುವುದು ಯುಕ್ತವೆಂದು ಕಂಡುಬಂದ ಹಿನ್ನೆಲೆಯಲ್ಲಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ಆಇ 114 ವಾತೆಇ 2018, ದಿನಾಂಕ: 22-11-2018**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ ವಾಣಿಜ್ಯ ತೆರಿಗೆಗಳ ಇಲಾಖೆಯಲ್ಲಿ 'ಗೌಪ್ಯ ಸೇವಾ ನಿಧಿ'ಯನ್ನು ಕೆಳಕಂಡ ಷರತ್ತುಗಳು ಹಾಗೂ ನಿಬಂಧನೆಗಳಿಗೆ ಒಳಪಟ್ಟು ಸ್ಥಾಪಿಸಿ ಆದೇಶಿಸಲಾಗಿದೆ.